**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ</u>**

**<u>ಸಿ.ಸಿ.ನಂ. 168/2013</u>**

ಸರಕಾರದ ಪರವಾಗಿಃ ಚಿತ್ತಾಪೂರ ಪೋ.ಠಾ.,

-:ವಿರುದ್ದ:-

ಆರೋಪಿ/ತರುಃ- ಗೋಪಾಲ ತಂದೆ ರಾಮು ರಾಠೋಡ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ2: ಪ್ರಾಸಾ-1 ರೇವಣಸಿದ್ದಪ್ಪ ತಂದೆ ರಾಣಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, 2003-04 ನೇ ಅವದಿಯಲ್ಲಿ ಆರೋಪಿತನು ತಮ್ಮ ಕಛೇರಿಯಲ್ಲಿ ಜೂನಿಯರ್ ಇಂಜಿನೀಯರ ಅಂತ ಕರ್ತವ್ಯ ನಿರ್ವಹಿಸುತ್ತಿದ್ದನೆಂದು, ಆ ಅವದಿಯಲ್ಲಿ ಸರ್ಕಾರದಿಂದ ಮಂಜೂರಾದ ಈ ಕೆಳಗೆ ಹೇಳಿದ ಕಾಮಗಾರಿಗಳಿಗೆ ನಗದು ಹಣ ಮತ್ತು ಆಹಾರ ಧಾನ್ಯಗಳ ಆರೋಪಿತನಿಗೆ ಸಂಬಂಧಿಸಿದೆ ಹಿಂದಿನ ಅಧಿಕಾರಿ ನೀಡಿದ್ದರು ಎಂದು ನುಡಿಯುತ್ತಾರೆ

1. ಕಮ್ಮರವಾಡಿ ಗ್ರಾಮದಲ್ಲಿ ಅಂಬೇಡ್ಕರ ಭವನ ನಿರ್ಮಾಣ
2. ಬೊಮ್ಮನಳ್ಳಿ ಗ್ರಾಮದಲ್ಲಿ ನೀರು ತಡೆಗೋಡೆ ನಿರ್ಮಾಣ.
3. ಆಲೂರು ಗ್ರಾಮದಲ್ಲಿ ಗೋ ಕಟ್ಟ ನಿರ್ಮಾಣ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ3: ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಈ ಕಾಮಗಾರಿಗೆ ನಗದು ಹಣ 1,91,877/- ರೂಪಾಯಿಗಳು, ಆಹಾರ ಧಾನ್ಯಗಳು 1,57,750/- ಹೀಗೆ ಒಟ್ಟು 3,45,627 ರೂಪಾಯಿಗಳನ್ನು ನೀಡಲಾಗಿದ್ದು, ಆರೋಪಿತನು ಮೇಲೆ ಹೇಳಿದ ಕಾಮಗಾರಿಗಳನ್ನು ಮಾಡದೆ ಹಣ ಮತ್ತು ಆಹಾರ ಧಾನ್ಯಗಳನ್ನು ದುರುಪಯೋಗ ಮಾಡಿಕೊಂಡಿದ್ದಾನೆಂದು, ತನ್ನ ಹಿಂದಿನ ಅಧಿಕಾರಿಗಳನ್ನು ಈ ಬಗ್ಗೆ ಹಲವು

ನೋಟಿಸಗಳನ್ನು ನೀಡಿದ್ದರೆಂದು, ಆದರೂ ಸಹ ಆರೋಪಿತನು ಮೇಲಿನ ಕಾಮಗಾರಿಗಳನ್ನು ಮಾಡಿದ್ದರಿಂದ ನಾನು ದಿ: 5-9-2005 ರಂದು ಆರೋಪಿ ವಿರುದ್ಧ ಪಿರ್ಯಾದಿ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ4: ಪ್ರಾಸಾ-2 ಬಾಬುರಾವ ಜಮಾದಾರ ತಂದೆ ಗುರಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಈ ಪ್ರಕರಣಕ್ಕೆ ಸಂಬಧಿಸಿದಂತೆ ಪೋಲಿಸರು ತನ್ನ ಹೇಳಿಕೆಯನ್ನು ದಿ:7-04-2006 ರಂದು ಪಡೆದಿದ್ದಾರೆಂದು, ಸರ್ಕಾರದ ಕ್ರಿಯಾ ಯೋಜನೆಯ ಪ್ರಕಾರ ತಾನು ತನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ಹಣವನ್ನು ಬಿಡುಗಡೆ ಮಾಡಿತ್ತಿದೇನು ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ದಿ: 11-09-2003 ನೇ ಇಸ್ವಿಯಲ್ಲಿ 39,000/- ರೂ. ನಗದು ಹಣವನ್ನು ಆರೋಪಿಗೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ5: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿಃ 28-10-2003 ರಂದು 50,000/- ನಗದು ಹಣವನ್ನು ಆರೋಪಿಗೆ ನೀಡಿರುತ್ತೇನೆಂದು, ಸದರಿ ನಗದು ಹಣವನ್ನು ಆರೋಪಿಗೆ ನೀಡುತ್ತೇನೆ. ಸದರಿ ನಗದು ಹಣ ನೀಡಿದ್ದರ ಬೆಗ್ಗೆ ತಾನು ಆರೋಪಿಯಿಂದ ರಸೀದಿಗಳನ್ನು ಪಡೆದುಕೊಂಡು, ಆರೋಪಿಗೆ ಹಣವನ್ನು ನೀಡಿರುತ್ತೇನೆಂದು, ಆರೋಪಿಯು ಅವರ ಇಲಾಖೆಯಿಂದ ಹಣವನ್ನು ಪಡೆದಿದ್ದು ಯಾವುದೆ ಕಾಮಗಾರಿಯನ್ನು ಮಾಡಿರುವುದಿಲ್ಲ ಎಂದು ನುಡಿಯತ್ತಾರೆ. ಅದರ ಬಗ್ಗೆ ನನ್ನ ಮೇಲಾಧಿಕಾರಿಗಳು ಆರೋಪಿಗಳ ವಿರುದ್ಧ ಒಂದು ದೂರನ್ನು ನೀಡಿದ್ದರೆಂದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ6: ಪ್ರಾಸಾ-11 ಭಾಗಣ್ಣ ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ: 20-04-2006 ರಂದು ಚಾಸಾ-18 ರವರ ಆದೇಶದ ಈ ಪ್ರಕರಣದಲ್ಲಿ ಹಾಗೂ ತಮ್ಮ ಠಾಣೆಯ

ಗುನ್ನೆ ಸಂಖ್ಯೆ: 141/2005 ಮತ್ತು 157/2005 ನೇದ್ದರಲ್ಲಿ ಕೈಬರಹ ಪರೀಕ್ಷೆಯ ಕುರಿತು ಕೆಲವು ದಾಖಲಾತಿಗಳನ್ನು ಚಾಸಾ-20ರವರು ನೀಡಿದ್ದು, ಸದರಿ ದಾಖಲಾತಿಗಳನ್ನು ನಿರ್ದೇಶಕರು ವಿಧಿ ವಿಜ್ಞಾನ ಕೇಂದ್ರ, ಬೆಂಗಳೂರು ಇವರಿಗೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ7: ಪ್ರಾಸಾ-12 ಪ್ರಭು ಸೂರಿನ್ ಪೋಲಿಸ ಇನ್ಸಪೆಕ್ಟರ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಸದರಿ ಪ್ರಕರಣದ ಕಡತವನ್ನು ತಾನು ಚಾಸಾ-20 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆಂದು, ದಿಃ 24.08.2007 ರಂದು ಚಾಸ-5 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ದಿಃ 09.08.2007 ರಂದು ಚಾಸಾ-1 ರವರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾಹಿತಿಯನ್ನು ನೀಡುವಂತೆ ಕೇಳಿಕೊಂಡಿರುತ್ತೇನೆಂದು, ಆರೋಪಿತನ ವಿರುದ್ಧ ಆರೋಪವನ್ನು ಮೇಲ್ನೋಟಕ್ಕೆ ಸಾಬಿತುಪಡಿಸಲು ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ8: ಪ್ರಾಸಾ-13 ಪ್ರಭು ಡಿ.ಟಿ. ಡಿ.ವೈ.ಎಸ್.ಪಿ. ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ: 27-09-2005 ರಂದು ಮಧ್ಯಾಹ್ನ 2-30 ರ ಸಮಯದಲ್ಲಿ ಚಾಸಾ-1ರವರು ಠಾಣೆಗೆ ಹಾಜರಾಗಿ ಒಂದು ಬೆರಳಚ್ಚು ಮಾಡಿದ ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ತಾನು ಒಂದು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೆನೆಂದು, ದಿನಾಂಕ: 09-11-2005ರಂದು ಪ್ರಕರಣದ ಆರೋಪಿಯಾದ ಗೋಪಾಲ ಈತನನ್ನು ದಸ್ತಗಿರಿ ಮಾಡುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ9: ಪ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ನಂತರ ಅದೇ ದಿನ ಚಾಸಾ-9 ಮತ್ತು ಚಾಸಾ-10ರವರನ್ನು ಬರಮಾಡಿಕೊಂಡು ಆರೋಪಿಯ ಕೈ-ಬರಹವನ್ನು ಪಡೆಯಲು ಪಂಚನಾಮ ಕ್ರಮವನ್ನು ಜರುಗಿಸಿರುತ್ತೇನೆಂದು, ದಿನಾಂಕ: 02-03-2006ರಂದು

ಚಾಸಾ-6 ರಿಂದ ಚಾಸಾ-8ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆಂದು, ಅದೇ ದಿನ ಚಾಸಾ-1 ರವರು ತೋರಿಸಿದ ಅಪರಿಪೂರ್ಣಗೊಂಡ ಕಾಮಗಾರಿ ಸ್ಥಳದ ಕಮರವಾಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಹತ್ತಿರ ಹಾಜರಾಗಿ ಅಂಬೇಡ್ಕರ್ ಭವನದ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿ, ಚಾಸಾ-11 ಮತ್ತು ಚಾಸಾ-12ರವರ ಸಮಕ್ಷಮ ಒಂದು ಪಂಚನಾಮ ಕ್ರಮವನ್ನು ಜರುಗಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ10: ಪ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ನಂತರ ಅದೇ ಆಲೂರ ಗ್ರಾಮಕ್ಕೆ ಭೇಟಿ ನೀಡಿ ಅಪರಿಪೂರ್ಣಗೊಂಡ ಗೋಕಟ್ಟೆಯನ್ನು ಪರಿಶೀಲಿಸಿ, ಚಾಸಾ-13 ಮತ್ತು ಚಾಸಾ-14ರವರ ಸಮಕ್ಷಮ ಒಂದು ಪಂಚನಾಮ ಕ್ರಮವನ್ನು ಜರುಗಿಸಿರುತ್ತೇನೆಂದು, ಅದೇ ದಿನ ಬೊಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿ, ಚಾಸಾ-15 ಮತ್ತು ಚಾಸಾ-16 ರವರ ಸಮಕ್ಷಮ ಒಂದು ಪಂಚನಾಮ ಕ್ರಮವನ್ನು ಜರುಗಿಸುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ11: ಪ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಅಮಾನತ್ತುಪಡಿಸಿಕೊಂಡ ದಾಖಲಾತಿಗಳ ಬಗ್ಗೆ ಮಾಲುಪಟ್ಟಿ ತಯ್ಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು, ದಿನಾಂಕ: 07-04-2006ರಂದು ಚಾಸಾ-3ರವರ ಹೇಳಿಕೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ದಿನಾಂಕ: 19-04-2006ರಂದು ಚಾಸಾ-4ರವರ ಹೇಳಿಕೆ, ದಿನಾಂಕ: 25-05-2006ರಂದು ಚಾಸಾ-5 ರವರ ಹೇಳಿಕೆ, ದಿನಾಂಕ: 27-05-2006ರಂದು ಚಾಸಾ-2ರವರ ಹೇಳಿಕೆ ಯಾರಾದರೂ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದುತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ12: ಪ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ನಂತರ ಆರೋಪಿಯ ಸೇವಾ ಪುಸ್ತಕದ ನಕಲು ಪ್ರತಿಯನ್ನು ಬಯಸು ಸದರಿ ಸೇವಾ ಪುಸ್ತಕವನ್ನು ಪರಿಶೀಲನೆ ಮಾಡುತ್ತೇನೆಂದು, ಜಪ್ತಿ ಮಾಡಿಕೊಂಡ ಮುದ್ದೆಮಾಲಿನಲ್ಲಿರುವ ಸಹಿ ಹಾಗೂ

ಆರೋಪಿಯ ಸಹಿಯನ್ನು ತಾಳೆ ಮಾಡಲು ಚಾಸಾ-17ರವರ ಮುಖಾಂತರ ಸದರಿ ದಾಖಲಾತಿಗಳನ್ನು ಬೆಂಗಳೂರಿನ ವಿಧಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿಕೊಟ್ಟಿರುತ್ತೇನೆಂದು, ನಂತರ ಈ ಪ್ರಕರಣದ ಕಡತವನ್ನು ಎ.ಎಸ್.ಐ. ರುಕ್ಕಪ್ಪ ಅವರಿಗೆ ತಾನು ವರ್ಗಾವಣೆಯಾಗಿದ್ದರಿಂದ ಹಸ್ತಾಂತರಿಸುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ**?**

ಉಃ

ಪ್ರಃ13: ಪ್ರಾಸಾ-14 ಚಂದ್ರಕಾಂತ್ ಪೂಜಾರಿ ತಂದೆ ಸಿದ್ದಾರಾಯ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿ: 30.06.2011ರಂದು ಈ ಪ್ರಕರಣದ ಕಡತವನ್ನು ಶ್ರೀ ಎಸ್.ವೈ ಪಾಟೀಲ್ ಅವರಿಂದ ಪಡೆದು ತನಿಖೆ ಮಾಡಿರುತ್ತೇನೆಂದು, ದಿ: 26.09.2012 ರಂದು ಆರೋಪಿತನ ವಿರುದ್ಧ ಅಭಿಯೋಜನೆ ನಡೆಸಲು ಸರಕಾರದಿಂದ ಆದೇಶ ಪಡೆದಿರುತ್ತೇನೆಂದು, ದಿ: 21.12.2012 ರಂದು ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸುತ್ತೇನೆಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ**?**

ಉಃ

ಪ್ರ-14 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-15 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 19.01.2026

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳು ಚಿತ್ತಾಪೂರ.**